ದಿನಾಂಕಃ 11-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿ ನನ್ನ ಸ್ನೇಹಿತನ ಹೆಂಡತಿ. ಆರೋಪಿಗೆ ದಿನಾಂಕ 10.11.2024 ರಂದು ರೂ. 3,00,000/- ಹಣವನ್ನು ನೀಡಿರುತ್ತೇನೆ. ಆರೋಪಿ ಹಣ್ಣಿನ ವ್ಯಾಪಾರಕ್ಕಾಗಿ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ. ಆರೋಪಿ ನಾನು ಹಣ ಪಾವತಿ ಮಾಡಿದ 15 ದಿನಗಳ ಹಿಂದೆ ಹಣವನ್ನು ಕೇಳಿರುತ್ತಾರೆ. ನಾನು ಬ್ಯಾಂಕಿನಿಂದ ರೂ. 2,00,000/- ಹಣವನ್ನು ಪಡೆದು ನಿವೇಶನ ಖರೀದಿ ಮಾಡಲು ಇಟ್ಟಿದ್ದ ಹಣವನ್ನು ಆರೋಪಿ ಮತ್ತು ಆರೋಪಿಯ ಗಂಡನಿಗೆ ನೀಡಿರುತ್ತೇನೆ. ನನ್ನ ಬ್ಯಾಂಕಿನ ಖಾತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಆರೋಪಿಗೆ ಹಣ ನೀಡಿದಾಗ ನನ್ನ ತಾಯಿ ಇದ್ದರು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ